# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**ಪತ್ರಿಕಾ ಪ್ರಕಟಣೆ** ದಿನಾಂಕ: 12.12.2019

## ನಗರವನ್ನು ಸೌಂದರ್ಯೀಕರಣಗೊಳಿಸಲು ಪ್ರತಿಷ್ಠಿತ ವಾಸ್ತುಶಿಲ್ಪಿಗಳ ಜೊತೆ ಸಭೆ:



ಬೆಂಗಳೂರು ನಗರವನ್ನು ಸೌಂದರ್ಯೀಕರಣಗೊಳಿಸುವ ಯೋಜನೆಗಳನ್ನು ರೂಪಿಸುವ ಉದ್ದೇಶದಿಂದ ಇಂದು ಐ.ಎ.ಎಸ್. ಆಫೀಸರ್ಸ್ ಅಸೋಸಿಯೇಷನ್ ಸಭಾಂಗಣದಲ್ಲಿ ಪ್ರತಿಷ್ಠಿತ ವಾಸ್ತುಶಿಲ್ಪಿಗಳೊಂದಿಗೆ ಸಭೆ ನಡೆಸಲಾಯಿತು. ಈ ವೇಳೆ ಆಡಳಿತ ಪಕ್ಷದ ನಾಯಕರಾದ ಶ್ರೀ ಮುನೀಂದ್ರ ಕುಮಾರ್, ವಿರೋಧ ಪಕ್ಷದ ನಾಯಕರಾದ ಶ್ರೀ ಅಬ್ದುಲ್ ವಾಜೀದ್, ಪಾಲಿಕೆ ಆಯುಕ್ತರಾದ ಶ್ರೀ ಬಿ.ಎಚ್.ಅನಿಲ್ ಕುಮಾರ್, ವಿಶೇಷ ಆಯುಕ್ತರಾದ ಶ್ರೀ ಅನ್ಬುಕುಮಾರ್, ಪಾಲಿಕೆ ಜಂಟಿ ಆಯುಕ್ತರು ಹಾಗೂ ಪಾಲಿಕೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬಿಬಿಎಂಪಿ ವತಿಯಿಂದ ಹೊಸದಾಗಿ ಕೈಗೆತ್ತಿಕೊಳ್ಳುವ ಯೋಜನೆಗಳಿಗೆ ವಾಸ್ತುಶಿಲ್ಪಿಗಳಿಂದ ವಿನ್ಯಾಸಗೊಳಿಸಿ ಪರಿಸರ ಸ್ನೇಹಿ ಮಾದರಿಯಲ್ಲಿ ಯೋಜನೆಗಳನ್ನು ಜಾರಿಗೊಳಿಸಲಾಗುವುದು ಎಂದು ಮಹಾಪೌರರು ತಿಳಿಸಿದರು. ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮಹಾಪೌರರು, ವಾಸ್ತುಶಿಲ್ಪಿಗಳ ಸಹಾಕಾರದೊಂದಿಗೆ ನಗರಕ್ಕೆ ಹೊಸ ಮೆರಗು ನೀಡಿ ಮತ್ತೆ ಉದ್ಯಾನಗರಿ ಎಂಬ ಖ್ಯಾತಿ ಪಡೆಯುವಂತೆ ಮಾಡಲಾಗುವುದು.

ವಾಸ್ತುಶಿಲ್ಪಿಗಳು ನಗರದಲ್ಲಿ ಸ್ಥಳಾವಕಾಶವಿರುವ ಜಾಗ, ಪಾದಚಾರಿ ಮಾರ್ಗ, ಬಸ್ ನಿಲ್ದಾಣ, ಪಾದಚಾರಿ ಮೇಲ್ಸೇತುವೆ/ಕೆಳಸೇತುವೆ, ಉದ್ಯಾನಗಳು, ರಾಜಕಾಲುವೆ, ಜಂಕ್ಷನ್ಸ್, ಕೆರೆಗಳು ಸೇರಿದಂತೆ ಇನ್ನಿತರ ಯೋಜನೆಗಳಿಗೆ ಅತ್ಯಾಕರ್ಷಣೆ ಹಾಗೂ ಪರಿಸರ ಸ್ನೇಹಿಯ ವಿನ್ಯಾಸಗಳನ್ನು ಸಿದ್ದಪಡಿಸಿ ಪಾಲಿಕೆಗೆ ನೀಡಿದರೆ ಅದೇ ಮಾದರಿಯಲ್ಲಿ ಯೋಜನೆ ಅನುಷ್ಠಾನಗೊಳಿಸಿ ಬೆಂಗಳೂರನ್ನು ಸುಂದರ ನಗರವನ್ನಾಗಿ ನಿರ್ಮಿಸಲಾಗುವುದು ಎಂದು ತಿಳಿಸಿದರು.

**ಸಭೆಯನ್ನು ಉದ್ದೇಶಿಸಿ ಮಾತನಾಡಿದ ಪಾಲಿಕೆ ಆಯುಕ್ತರು,** ಬೆಂಗಳೂರನ್ನು ಸುಂದರ ನಗರವನ್ನಾಗಿಸುವ ಉದ್ದೇಶದಿಂದ ಪ್ರತಿಷ್ಠಿತ ವಾಸ್ತುಶಿಲ್ಪಿಗಳೊಂದಿಗೆ ಸಭೆ ನಡೆಸಲಾಗುತ್ತಿದೆ. ಈ ಹಿಂದೆ ಬೆಂಗಳೂರನ್ನು ಉದ್ಯಾನ ನಗರ ಎಂದು ಕರೆಯಲಾಗುತ್ತಿತ್ತು. ಆದರೀಗ ದಿನೇ ದಿನೆ ಕಟ್ಟಡಗಳ ನಿರ್ಮಾಣ ಹೆಚ್ಚಾಗುತ್ತಿದ್ದು, ಕಾಂಕ್ರೀಟ್ ನಗರವಾಗಿ ಬೆಳೆಯುತ್ತಿದ್ದು, ಪರಿಸರ ಸ್ಥೇಹಿ/ಸುಂದರ ಕಟ್ಟಡಗಳು ನಿರ್ಮಾಣವಾಗುತ್ತಿಲ್ಲ. ಆ ಕಾರಣಕ್ಕಾಗಿ ನಗರದಲ್ಲಿ ಕಟ್ಟಡಗಳು, ಮೇಲ್ಸೇತುವೆ ಹಾಗೂ ಆದರ ಕೆಳಭಾಗದ ಜಾಗ, ಅನುಪಯುಕ್ತ ಸ್ಥಳ, ಮೀಡಿಯನ್ಸ್, ಪಾದಚಾರಿ ಮಾರ್ಗ ಸೇರಿದಂತೆ ಇನ್ನಿತರ ಸ್ಥಳಗಳನ್ನು ಸುಂದರೀಕರಣಗೊಳಿಸಲು ಸಲಹೆಗಳು ನೀಡಿದಲ್ಲಿ ಅದನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಿ ನಗರವನ್ನು ಆಕರ್ಷಣೀಯವಾಗಿ ಕಾಣುವಂತೆ ಮಾಡಲಾಗುವುದು ಎಂದರು.

ನಗರದಲ್ಲಿರುವ ಪುರಾತನ ನೆನಪುಗಳು ಮುಂದಿನ ಪೀಳಿಗೆಗೂ ತಿಳಿಯಬೇಕಿದೆ. ಆ ಉದ್ದೇಶದಿಂದ ಪಾಲಿಕೆ ವ್ಯಾಪ್ತಿವ್ಯಾಪ್ತಿಯಲ್ಲಿರುವ ಪುರಾತನ ನೆನಪುಗಳಿಗೆ ವಾಸ್ತುಶಿಲ್ಪಿಗಳು ಮರುವಿನ್ಯಾಸ ನೀಡಿದರೆ ಅವುಗಳನ್ನು ಪುನರ್ ನವೀಕರಣ ಮಾಡಲಾಗುವುದು. ಜೊತೆಗೆ ಹೊಸ ಯೋಜನೆಗಳಿಗೆ ವಿನೂತನ ವಿನ್ಯಾಸ ಸಿದ್ದಪಡಿಸಿಕೊಡಿ ಅದೇ ಮಾದರಿಯಲ್ಲಿ ಯೋಜನೆ ಜಾರಿಗೊಳಿಸಲಾಗುವುದು. ಇದಕ್ಕೆ ಪಾಲಿಕೆ ಅಧಿಕಾರಿಗಳು, ಇಂಜಿನಿಯರ್ ಗಳು ನಿಮ್ಮ ಜೊತೆ ಕೈಜೋಡಿಸಿಲಿದ್ದಾರೆ ಎಂದರು.

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**